‘ಯಾಕೆ ಸರ್? ಏನದು ನೀವು ಓದ್ತಾ ಇರೋದು? ತುಟೀ ಮೇಲೇನೇ ನಗ್ತಾ ಇದ್ದೀರಿ? ಯಾವ್ದಾದ್ರೂ ಸ್ವೀಟ್ ಗರ್ಲ್ ಬರೆದಿರೋ ಲವ್ ಲೆಟರಾ?’ ಎಂದು ತನ್ನ ಎಂದಿನ ಹುಡುಗಾಟದ ಶೈಲಿಯಲ್ಲಿ ಡೈರೆಕ್ಟರ್ ಸಾಹೇಬರಿಗೆ ಪ್ರಶ್ನೆ ಕೇಳಿದ್ದಳು ಪಪಿಹಾ. ತಮ್ಮ ಮಗಳ ವಯಸ್ಸಿನವಳಾಗಿದ್ದ ಸ್ಟೆನೋ ಪಪಿಹಾ ಅಂದರೆ ಅವರಿಗೂ ಅಷ್ಟೇ ಸಲಿಗೆ. ‘ಏನಮ್ಮಾ ನೀನು? ರಿಟೈರ್ ಆಗೋ ಈ ವಯಸ್ಸಿನಲ್ಲಿ ನನ್ನಂಥವನಿಗೆ ಯಾವ ಹುಡುಗಿ ಪ್ರೇಮಪತ್ರ ಬರೀತಾಳೆ ಕಣಮ್ಮಾ? ನೀನೊಂದು, ಏನೇನೋ ಹುಚ್ಚುಚ್ಚು ಮಾತಾಡ್ತೀಯಾ...’ ಎಂದು ಅದೇ ಹುಡುಗಾಟದ ಶೈಲಿಯಲ್ಲಿ ಉತ್ತರ ಕೊಡುತ್ತಿರುವಾಗಲೇ, ಚೂಟಿ ಪಪಿಹಾ, ‘ಅಯ್ಯೋ, ಸರ್, ಹೀಗ್ಯಾಕಂತೀರಿ? ಈ ಚೇರ್ ಮೇಲೆ ಕುಳಿತಿರೋ ಒಂಬತ್ತು ಜನ ಡೈರೆಕ್ಟರ್‌ಗಳನ್ನ ನೋಡಿದ್ದೀನಿ ನಾನು. ಆರು ಜನ ಸಾಹೇಬ್ರು, ಸರ್ವೀಸ್‌ನಲ್ಲಿ ಇರೋವಾಗ ಏನೇನು ಮಾಡಿದ್ರೂ ಅನ್ನೋ ಮಾತು ದೂರ ಉಳೀತು, ಆಮೇಲೂ ಇರ್ಲಿ ಅಂತ, ರಿಟೈರ್ ಆಗೋ ಮೊದ್ಲೇ ಕೆಲವರು ಟಿಮ್... ಟಿಮ್... ವ್ಯವಸ್ಥೆ ಮಾಡಿಕೊಂಡೇ ಹೋಗಿದ್ದನ್ನ ನಾನು ನೋಡಿಲ್ವಾ? ಅದರಲ್ಲೇನಿದೆ ಬಿಡಿ ಸರ್. ನೀವು ಬರೋ ಮೊದ್ಲು ಇದ್ದ ಸಾಹೇಬರ ರೊಮ್ಯಾಂಟಿಕ್ ಕಥೆ ಗೊತ್ತೇ ಇದೆಯಲ್ಲ ನಿಮಗೂ?’ ಎಂದು ಆ ಕುರ್ಚಿಯ ಮೇಲೆ ಕುಳಿತವರ ಇತಿಹಾಸವನ್ನೇ ಬಿಚ್ಚತೊಡಗಿದಳು. ಇನ್ನು ಇವಳಿಗೆ ಹೆಚ್ಚು ಮಾತಾಡುವ ಅವಕಾಶ ಕೊಟ್ಟರೆ ಇಡೀ ದಿನ ಇದನ್ನೇ ಮಾಡ್ತಾಳೆ ಎಂದು ಯೋಚಿಸಿದ ಡಾ. ಚಟರ್ಜಿ ಅವರು, ‘ಹಾಂ... ಹಾಂ... ಸಾಕಮ್ಮಾ, ಸಾಕು. ನಿನಗೆ ಕಚೇರಿಯ ಫೈಲುಗಳನ್ನ ವ್ಯವಸ್ಥಿತ ಕ್ರಮದಲ್ಲಿ ಶಿಸ್ತಾಗಿ ಇಡೋದು ಗೊತ್ತಿಲ್ಲದಿದ್ದರೂ, ಇಂಥ ವಿಷಯಗಳ ಕ್ರೊನೋಲೋಜಿಕಲ್ ಹಿಸ್ಟರಿಯನ್ನ ಮಾತ್ರ ತುಂಬ ಕ್ರಮಬದ್ಧವಾಗಿ ಜೋಡಿಸಿ ಇಟ್ಕೊಂಡಿದ್ದೀಯಾ. ಮೆಚ್ಚಬೇಕು ನಿನ್ನ ಕೆಲಸವನ್ನ. ಅದೇನು ಸ್ಟೆನೋಗಿರಿಯೋ ನಿಂದು!’ ಎನ್ನುತ್ತ, ಅವಳ ಹುಡುಗಾಟಿಕೆಗೆ ಅಂತ್ಯ ಹೇಳುವ ಸೂಚನೆ ಕೊಟ್ಟರು.

ಬಾಸ್ ದನಿ ಒಂದಿಷ್ಟು ಬೇರೆ ದಿಕ್ಕಿಗೆ ತಿರುಗಿದ ಕೂಡಲೇ ಗಂಭೀರವಾದ ಪಪಿಹಾ, ‘ಸರ್ ಏನಾದ್ರೂ ಡಿಕ್ಟೇಶನ್ ಇತ್ತಾ?’ ಎನ್ನುತ್ತ ಆ ಇಡೀ ವಾತಾವರಣಕ್ಕೆ ಬೇರೆ ತಿರುವು ಕೊಡಲು ಯತ್ನಿಸಿದಳು. ಅದು ಅವಳ ಚಾಲಾಕಿತನದ ರೀತಿ. ಒಂಬತ್ತು ಜನ ನಿರ್ದೇಶಕರಿಗೆ ಸ್ಟೆನೋ ಆಗಿ ಕೆಲಸ ಮಾಡಿದ ಅವಳು ಎಷ್ಟೆಲ್ಲ ಅನುಭವ ಸಂಪಾದಿಸಿರಬೇಕು! ಊಹಿಸಬಹುದು. ತಕ್ಷಣ ತಮ್ಮ ಕೆಲಸದ ಕಡೆ ಗಮನಿಸಿದ ಡಾ. ಚಟರ್ಜಿ ಅವರು, ‘ನೋಡು, ಪಪಿಹಾ ತುಟೀ ಮೇಲೇನೇ ಯಾಕೆ ನಗ್ತಾ ಇದ್ದೀರಿ ಅಂತ ಕೇಳಿದೆಯಲ್ಲ; ಯಾಕೆ ಗೊತ್ತಾ? ಈ ರಿಪೋರ್ಟಿನ ಕೊನೆಯ ಪ್ಯಾರಾವನ್ನ ಒಮ್ಮೆ ನೀನೂ ಓದಿ ನೋಡು, ವಿಷಯ ಏನೂ ಅಂತ ನಿನಗೂ ಗೊತ್ತಾಗ್ತದೆ’ ಎನ್ನುತ್ತಾ ಆಡಿಟ್ ಪಾರ್ಟಿಯವರು ಕೊಟ್ಟು ಹೋಗಿದ್ದ ರಿಪೋರ್ಟನ್ನು ಅವಳ ಕೈಗಿಟ್ಟು, ‘ಹೂಂ, ಒಂದಿಷ್ಟು ಜೋರಾಗೇ ಓದು... ನಾನೂ ಇನ್ನೊಮ್ಮೆ ಕೇಳ್ತೇನೆ’ ಎಂದರು.

ರಿಪೋರ್ಟ್ ಮೇಲೆ ಒಮ್ಮೆ ಕಣ್ಣಾಡಿಸಿದ ಪಪಿಹಾ, ಬಾಸ್ ಆದೇಶಿಸಿದ ಮೇರೆಗೆ ಅದರ ಕೊನೆಯ ಪ್ಯಾರಾವನ್ನು ಒಂದಿಷ್ಟು ಗಟ್ಟಿಯಾಗಿಯೇ ಓದತೊಡಗಿದಳು. ‘ನಿಮ್ಮ ಕಚೇರಿಯ ಆಡಿಟಿಂಗ್ ಮಾಡುವಾಗ ಇಲ್ಲಿರುವ ಪ್ರಾಮಾಣಿಕತೆ, ದಕ್ಷತೆ, ಆಡಳಿತದಲ್ಲಿ ಯಾವ ಕೊರತೆಯೂ ಆಗದಂತೆ ನೋಡಿಕೊಂಡ ರೀತಿ, ಹಣಕಾಸಿನ ವಿಷಯದಲ್ಲಿರುವ ಶುದ್ಧತೆ, ಲೆಕ್ಕ–ಪತ್ರಗಳನ್ನು ದಾಖಲಿಸಿಟ್ಟ ಕ್ರಮ, ಒಂದು ಪೈಸೆಯೂ ಹೆಚ್ಚೂಕಡಿಮೆ ಆಗದಂತೆ ನೋಡಿಕೊಂಡ ಬಗೆ–ಇವುಗಳನ್ನೆಲ್ಲ ಗಮನಿಸಿದ ನಮ್ಮ ಆಡಿಟ್ ಪಾರ್ಟಿಯು ನಿಜಕ್ಕೂ ತನ್ನ ಸಂತೋಷವನ್ನು ವ್ಯಕ್ತಪಡಿಸುತ್ತದೆ. ಇದರಲ್ಲಿ ನಿರ್ದೇಶಕರಾದ ನಿಮ್ಮ ಪಾತ್ರವೇ ಮುಖ್ಯವಾಗಿರುವ ಕಾರಣ ನಿಮಗೆ ಮೊದಲು ಅಭಿನಂದನೆ. ಜೊತೆಗೇ, ನಿಮ್ಮ ಎಲ್ಲ ನಿರ್ದೇಶನಗಳನ್ನೂ ಚಾಚೂ ತಪ್ಪದಂತೆ ಪಾಲಿಸಿ, ಪ್ರಾಮಾಣಿಕವಾಗಿ ಕೆಲಸ ಮಾಡಿದ ಕಚೇರಿಯ ಎಲ್ಲ ಸಿಬ್ಬಂದಿಗೂ ಅಭಿನಂದನೆಗಳು. ಈ ರಿಪೋರ್ಟನ್ನು ನಾವು ಮೇಲಿನ ಕಚೇರಿಗೆ ಕಳುಹಿಸುವಾಗ,